ಹಾಸನದ ಇಂಜಿನಿಯರಿಂಗ್ ಟೆಕ್ನಿಷಿಯನ್ ಕೋ–ಆಪರೇಟಿವ್ ಸೊಸೈಟಿ ಆಡಿಟ್

(1993): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):– ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನದ ಇಂಜಿನೀಯರಿಂಗ್ ಮತ್ತು ಟೆಕ್ನೀಶಿಯನ್ ಕೋ-ಆಪ್ ಸೊಸೈಟಿಯ ಆಡಿಟ್ ಯಾವ ತಾರೀಖಿನಲ್ಲಿ ಆಯಿತು.

ಆ. ಈ ಸೊಸೈಟಿಯ ಆಡಿಟ್ ಸರಿಯಾಗಿ ನಡೆದಿಲ್ಲವೆಂದು ದೂರು ಬಂದ ನಂತರ ರಿ–ಆಡಿಟ್ ಯಾವ ತಾರೀಖಿನಲ್ಲಿ ಆಯಿತು.

ಇ. ರಿ–ಆಡಿಟ್ ಪ್ರಕಾರ ಎಷ್ಟು ಹಣ ದುರುಪಯೋಗವಾಗಿರುವುದು ಬೆಳಕಿಗೆ ಬಂದಿದೆ. ಈ ಹಣವನ್ನು ದುರುಪಯೋಗ ಮಾಡಿಕೊಂಡವರ ವಿವರ ನೀಡುವುದು.

ಈ. ಈ ಹಣ ದುರುಪಯೋಗ ಮಾಡಿಕೊಂಡ ವ್ಯಕ್ತಿಯ ಮೇಲೆ ಸರ್ಕಾರವು ಕಾನೂನು ರೀತ್ಯಾ ಯಾವ ಕ್ರಮ ತೆಗೆದುಕೊಂಡಿದೆ, ವಿವರ ಕೊಡಿರಿ.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):-

ಅ. ಲೆಕ್ಕ ಪರಿಶೋಧನೆಯನ್ನು ಮಾಡಿದ ದಿನಾಂಕಗಳು ಈ ಕೆಳಕಂಡಂತೆ ಇರುತ್ತವೆ.

ವರ್ಷ	ದಿನಾಂಕ
1983-84	18-09-1984
1984-85	28-10-1985
1985-86	19-11-1986
1986-87	14-10-1988

ಆ. ಲೆಕ್ಕ ಪರಿಶೋಧನೆಯು ಸಮರ್ಪಕವಾಗಿ ಜರುಗಿಲ್ಲವೆಂಬ ದೂರು ಸಂಘದವರಿಂದ ಬಂದ ನಂತರ 1983-84, 1984-85, 1985-86 ಮತ್ತು 1986-87 ನೇ ಸಾಲುಗಳ ಲೆಕ್ಕಗಳ ಪುನರ್ ಪರಿಶೀಲನೆ ಹಾಗೂ ನ್ಯೂನತೆಗಳ ಪರಿಶೀಲನೆಯನ್ನು ಜರುಗಿಸಿ, ಪುನರ್ ಪರಿಶೀಲನಾ ಅಂಶಗಳನ್ನು 1989-90 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಅಳವಡಿಸಿಕೊಂಡಿದ್ದು ಈ ವರದಿಯು ದಿನಾಂಕ: 08-03-93ರಂದು ಬಿಡುಗಡೆ ಆಗಿರುತ್ತದೆ.

ಇ. ರೂ. 65,219–98ಗಳನ್ನು ಈ ಕೆಳಗಿನಂತೆ ಹೊಣೆಗಾರರಾದವರಿಂದ ವಸೂಲಾಗಬೇಕಾಗಿದೆ.

	ರೂ.
1. ಶ್ರೀ ರಾಜಶೇಖರ, ಆಗಿನ ಕಾರ್ಯದರ್ಶಿ,	60,451–07
2. ಶ್ರೀ ಚಂದ್ರೇಗೌಡ, ಗುಮಾಸ್ತ	33–00
3. ಸಂಯುಕ್ತ ಹೊಣೆಗಾರಿಕೆ ನಿರ್ಧರಿಸಿದೆ– ಪುರವಾಟೆದಾರರಿಂದ: ಗ್ರಾಹಕರಿಂದ:	4,735–91

ಆಗಿನ ಕಾರ್ಯದರ್ಶಿ ಶ್ರೀ ರಾಜಶೇಖರ್
ರವರಿಂದ

ಒಟ್ಟು 65,219-98

ಈ. 1989-90ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ದಿನಾಂಕ: 08-03-1993ರಂದು ಬಿಡುಗಡೆ ಮಾಡಿದ್ದು ಈ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಸೋಮವಾರಪೇಟೆ (ತಾ)ನಲ್ಲಿ ಉರುಉಡವೇ ಜಾಗದಲ್ಲಿ ವಾಸವಾಗಿರುವ ಜನರ ಬಗ್ಗೆ

(2066): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಎಷ್ಟೋ ಜನ ಬಡವರು, ಕೂಲಿಕಾರರು ಊರುಉಡವ ಜಾಗದಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಅವರುಗಳಿಗೆ ಆ ಜಾಗಕ್ಕೆ ಹಕ್ಕುಪತ್ರ ನೀಡಲಾಗಿದೆಯೇ;

ಇ. ಇಲ್ಲದಿದ್ದಲ್ಲಿ ಹಕ್ಕುಪತ್ರ ನೀಡಲಾಗುವುದೆ ಹಾಗೂ ಯಾವಾಗ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. ಹೌದು.

ಆ. ಇಲ್ಲ.

ಇ. ಈ ಬಗ್ಗೆ ಅರಣ್ಯ ಇಲಾಖೆಯವರೊಂದಿಗೆ ಪರಿಶೀಲಿಸಲಾಗುತ್ತಿದೆ.

ಸೋಮವಾರ ಪೇಟೆ ತಾಲ್ಲೂಕಿನ ದೇವಸ್ಥಾನಗಳ ಜೀರ್ಣೋದ್ಧಾರ

(2067): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸೋಮವಾರಪೇಟೆ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ದೇವಸ್ಥಾನಗಳಿಗೆ ಜೀರ್ಣೋದ್ಧಾರಕ್ಕಾಗಿ 1891-92, 1992-93ನೇ ಸಾಲಿಗೆ ಹಣ ಒದಗಿಸಲಾಗಿದೆ;

ಆ. ಅದರ ಒಟ್ಟು ಮೊತ್ತವೆಷ್ಟು;

ಇ. ಎಷ್ಟು ಕೆಲಸ ಪೂರ್ಣಗೊಂಡಿದೆ;

ಈ. ಈ ವರ್ಷ ಎಷ್ಟು ಹಣ ಬಿಡುಗಡೆ ಮಾಡಲಾಗುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. 1991-92ರಲ್ಲಿ 8 ದೇವಸ್ಥಾನಗಳಿಗೆ ರೂ. 1,00,000-00 ಒದಗಿಸಲಾಗಿದೆ. 1992-93ರಲ್ಲಿ 2 ದೇವಸ್ಥಾನಗಳಿಗೆ ರೂ. 35,000-00 ಒದಗಿಸಲಾಗಿದೆ.